ಕನ್ನಡಪ್ರಭ

ಪುಟ 12, ಸೋಮವಾರ, 26 ಅಕ್ಟೋಬರ್ 2009

ಕ್ರೀಡೆ

ರ‍್ಯಾಲಿ: ಸುಪ್ರದೀಪ್, ಜಾಕೀರ್‌ಗೆ ಪ್ರಶಸ್ತಿ

ವಿರಾಜಪೇಟೆ: ಬಿಟ್ಟಂಗಾಲದ ನಾಯಡ ಶ್ಯಾಮ್ ಹಾಗೂ ಕಂಜಿತಂಡ ಮಂದಣ್ಣ ಗದ್ದೆಯಲ್ಲಿ ಭಾನುವಾರ ನಡೆದ ಡರ್ಟ್ ಟ್ರ್ಯಾಕ್ 4 ಚಕ್ರದ ರ‍್ಯಾಲಿಯಲ್ಲಿ ಜಾಕೀರ್ ಹಾಗೂ ಸುಪ್ರದೀಪ್ ಪ್ರಶಸ್ತಿ ಗೆದ್ದರು.

■ **ಫಲಿತಾಂಶ:** ಕ್ರೀಡೆಯಲ್ಲಿ ಒಟ್ಟು 44 ಸ್ಪರ್ಧಿಗಳು ಭಾಗವಹಿಸಿದ್ದರು. ಅಂತಿಮವಾಗಿ 4 ವಾಹನಗಳು ಮಾತ್ರ ಉಳಿದುಕೊಂಡಿತ್ತು. ಜಿಪ್ಸಿ ವಿಭಾಗದಲ್ಲಿ 5.46.57 ಸೆ.ಗಳಲ್ಲಿ ಬೆಂಗಳೂರಿನ ಜಾಕೀರ್ ಪ್ರಥಮ ಸ್ಥಾನ ಪಡೆದುಕೊಂಡರು. ಜೀಪ್ ವಿಭಾಗದಲ್ಲಿ ಸಕಲೇಶಪುರದ ಸುಪ್ರದೀಪ್, 9.35 ಸೆ.ಗಳಲ್ಲಿ ಗುರಿ ತಲುಪಿ ಪ್ರಥಮ, ಬೆಂಗಳೂರಿನ ವಿಜಯಕುಮಾರ್ 10.19.28 ಸೆ.ಗಳಲಿ ಗುರಿ ತಲುಪಿ ದ್ವಿತೀಯ ಸ್ಥಾನ ಪಡೆದುಕೊಂಡರು. ಪ್ರೇಕ್ಷಕರ ಕುತೂಹಲ ಕೆರಳಿಸಿದ್ದ ಕಪ್ಪು ಬಣ್ಣದ ಸ್ಕಾರ್ಪಿಯೋ ಜೀಪ್ ತೃತೀಯ ಸುತ್ತಿನಲ್ಲಿ ತಾಂತ್ರಿಕ ತೊಂದರೆಗೀಡಾದ ಕಾರಣ ಸ್ಪರ್ಧೆಯಿಂದ ನಿರ್ಗಮಿಸಿತು. ಹಳ್ಳ, ದಿಣ್ಣೆ ಹಾಗೂ ಕೆಸರುಗುಂಡಿಗಳ ಮಧ್ಯೆ ಹಾದುಹೋದ ಜೀಪುಗಳು ನೋಡುಗರ ಮನ ತಣಿಸಿತು. ಪಂದ್ಯದ ಸಾರಥ್ಯ ಆದಿತ್ಯ ಅವರದ್ದಾಗಿತ್ತು.

ತೃತೀಯ ಸುತ್ತಿನಲ್ಲಿ ತಾಂತ್ರಿಕ ತೊಂದರೆಗೀಡಾಗಿ ಸ್ಪರ್ಧೆಯಿಂದ ಹೊರಬಿದ್ದ ಕಪ್ಪು ಸ್ಕಾರ್ಪಿಯೋ.

ಏರಿ ಏರುತ್ತಿರುವ ಜೀಪ್.



ಕ್ರೀಡಾ ಸಂಕ್ಷೇಪ

ವುಶು ಸ್ಪರ್ಧೆ: ರಾಜ್ಯಕ್ಕೆ 2 ಚಿನ್ನ

ಬಾಗಲಕೋಟೆ: ನಗರದಲ್ಲಿ ಆರಂಭವಾಗಿರುವ 2ನೇ ದಕ್ಷಿಣ ವಲಯ ವುಶು ಚಾಂಪಿಯನ್‌ಷಿಪ್‌ನ ಮೊದಲ ದಿನವೇ ಮೂರು ಚಿನ್ನ ಗೆದ್ದಿದ್ದ ಕರ್ನಾಟಕದ ಸ್ಪರ್ಧಾಳುಗಳು ಭಾನುವಾರವೂ ತಮ್ಮ ಚಿನ್ನದ ಬೇಟೆಯನ್ನು ಮುಂದುವರಿಸಿದ್ದಾರೆ. ಪುರುಷರ ವಿಭಾಗದ ಫೈಟಿಂಗ್‌ನ ವಿವಿಧ ವಿಭಾಗಗಳಲ್ಲಿ ಕರ್ನಾಟಕದ ಇಬ್ಬರು ಸ್ಪರ್ಧಿಗಳು ಚಿನ್ನದ ಪದಕ, ಇನ್ನು ಕೆಲವರು ಬೆಳ್ಳಿ, ಕಂಚಿನ ಪದಕ ಗೆದ್ದಿದ್ದಾರೆ.

ಪದಕ ಗೆದ್ದವರು: 48ಕೆಜಿಯೊಳಗೆ–ಅಮೀನುದ್ದಿನ(ಚಿನ್ನ), 52 ಕೆಜಿ: ವಾಲಿಕಾರ್–ಬೆಳ್ಳಿ, ಈರಣ್ಣ ಮೊಕಾಶಿ(ಕಂಚು). 60 ಕೆಜಿಯೊಳಗೆ:ಗದ್ದೆಪ್ಪ ಕೊರವರ(ಬೆಳ್ಳಿ), 65 ಕೆಜಿಯೊಳಗೆ: ಐ.ಅಜಯ್ ಕುಮಾರ್(ಚಿನ್ನ)

80 ಕೆಜಿಯೊಳಗೆ:ದುಂಡಪ್ಪ(ಕಂಚು), 85 ಕೆಜಿಯೊಳಗೆ:ಗಣಪತಿ ಪ್ರವೀಣಕುಮಾರ್(ಬೆಳ್ಳಿ), 90ಕೆಜಿಯೊಳಗೆ: ಬಸವರಾಜ ಬಾಗೇವಾಡಿ(ಬೆಳ್ಳಿ), 90ಕೆಜಿ ಮೇಲ್ಪಟ್ಟು:ಯಲ್ಲಪ್ಪ ವಾಲಿಕಾರ್(ಬೆಳ್ಳಿ).

ಕೆಎಸ್‌ಸಿಎ ಕ್ರಿಕೆಟ್: ಎರಡೂ ಪಂದ್ಯ ಡ್ರಾ

ಹುಬ್ಬಳ್ಳಿ: ಕೆಎಸ್‌ಸಿಎ ಅಂತರ ವಲಯ 16 ವರ್ಷದೊಳಗಿನವರ ಕ್ರಿಕೆಟ್ ಪಂದ್ಯಾವಳಿಯ ಎರಡೂ ಪಂದ್ಯಗಳು ಡ್ರಾ ಆಗಿವೆ. 2 ಪಂದ್ಯಗಳ ಸಂಕ್ಷಿಪ್ತ ಸ್ಕೋರ್ ಇಂತಿದೆ.

ಕಂಬೈಂಡ್ ಇಲೆವನ್ ಪ್ರಥಮ ಇನ್ನಿಂಗ್ಸ್: 289ಕ್ಕೆ ಆಲೌಟ್, ಧಾರವಾಡ ವಲಯ ಪ್ರಥಮ ಇನ್ನಿಂಗ್ಸ್: 167ಕ್ಕೆ ಆಲೌಟ್ (ಶಶಾಂಕ ಹುಲಮನಿ 47, ನಿತೇಶ ಹನಮಶೇಟ್ 40, ಮಧು ಜಿ. 12ಕ್ಕೆ 4 ವಿಕೆಟ್), ಕಂಬೈಂಡ್ ಇಲೆವನ್ ದ್ವಿತೀಯ ಇನ್ನಿಂಗ್ಸ್: 177ಕ್ಕೆ ಆಲೌಟ್ (ಅನುರಾಗ ಬಾಜಪೈ 51, ರಾಹುಲ್ ಎಸ್. 29ಅ, ಸಮೀರ್ ಗುಳೇದ ಗುಡ್ಡ 44ಕ್ಕೆ 6ವಿಕೆಟ್)

ಮಂಗಳೂರು ವಲಯ ಪ್ರಥಮ ಇನ್ನಿಂಗ್ಸ್: 282ಕ್ಕೆ ಆಲೌಟ್, ಶಿವಮೊಗ್ಗ ಇಲೆವನ್ 228ಕ್ಕೆ ಆಲೌಟ್ (ಶ್ರವಣ್ 47 ಅ, ಸುನೀಲ 32, ಉಮೇಶ 30, ಗೋಪಾಲ ಶೆಟ್ಟಿ 49ಕ್ಕೆ 4), ಮಂಗಳೂರು ವಲಯ ದ್ವಿತೀಯ ಇನ್ನಿಂಗ್ಸ್: 170ಕ್ಕೆ ಆಲೌಟ್ (ಕಾರ್ತಿಕ್ 48ಅ, ಲಾಲಸಚಿನ್ 36, ಗೋಪಾಲ ಶೆಟ್ಟಿ 33, ಸುಫಿಯಾನ್ 10ಕ್ಕೆ 4ವಿಕೆಟ್).

ಸು–ಡೊಕು 1555ರ ಸರಿಯುತ್ತರ

ಪ್ರಶ್ನೆ ವಿಜಯಾ ಪ್ರಭುದೆಲ್

8	1	7	9	2	5	3	6	4
3	2	4	1	8	6	5	7	9
5	9	6	7	4	3	2	8	1
4	3	2	8	7	9	6	1	5
7	8	1	6	5	2	9	4	3
6	5	9	3	1	4	8	2	7
2	6	3	4	9	7	1	5	8
1	7	5	2	3	8	4	9	6
9	4	8	5	6	1	7	3	2

KANNADA PRABHA
Phone: 22866893-6, Fax: 080-22866617
RNI Reg. No. RN.17012/67

Printed and Published by
K. Sankaran Nayar on behalf of Express Publications (Madurai) Ltd., at Express Press, No.1, Queen's Road, Bangalore-560 001.
Editor: SHIVASUBRAHMANYA. K
ಸಂಪಾದಕ: ಶಿವಸುಬ್ರಹ್ಮಣ್ಯ. ಕೆ

Bangalore. Vol. 43, No. 295

COPYRIGHT: Express Publications (Madurai) Ltd. All rights reserved. Reproduction in any manner, electronic or otherwise, in whole or in part, without prior written permission is prohibited.

ಸೋಲಿನ ಖಾತೆ ಆರಂಭ

■ ಹರ್ಭಜನ್, ಪ್ರವೀಣ್ ಮಿಂಚಿನಲ್ಲೂ ಭಾರತಕ್ಕೆ 4 ರನ್ ಸೋಲು
■ ಆಸ್ಟ್ರೇಲಿಯಕ್ಕೆ 1–0 ಸರಣಿ ಮುನ್ನಡೆ ■ ಹಸ್ಸಿ ಪಂದ್ಯಶ್ರೇಷ್ಠ

ವಡೋದರ, ಅ. 25: ಆಸೀಸ್ ವಿರುದ್ಧದ ಏಳು ಪಂದ್ಯಗಳ ಏಕದಿನ ಸರಣಿಯಲ್ಲಿ ಭಾರತ ಸೋಲಿನ ಖಾತೆ ತೆರೆದಿದೆ. ಆದರೆ ಹರ್ಭಜನ್ ಸಿಂಗ್ (49) ಹಾಗೂ ಪ್ರವೀಣ್ ಕುಮಾರ್ (ಅಜೇಯ 40) ಸ್ಫೋಟಕ ಬ್ಯಾಟಿಂಗ್ ಪ್ರದರ್ಶಿಸಿ ಸೋಲಿನಲ್ಲೂ ಮಿಂಚಿದ್ದಾರೆ.

293 ರನ್ ಜಯದ ಗುರಿಹೊತ್ತ ಭಾರತ ಕೊನೆ ಕ್ಷಣದವರೆಗೂ ಹೋರಾಟ ನೀಡಿ 4 ರನ್‌ನಿಂದ ಪರಾಭವಗೊಂಡಿತು. ಇದರೊಂದಿಗೆ ಆಸೀಸ್ 7 ಪಂದ್ಯಗಳ ಸರಣಿಯಲ್ಲಿ 1–0ಯಿಂದ ಮುನ್ನಡೆ ಸಾಧಿಸಿದೆ.

■ **ಟೈಟಾನ್ ಕಪ್ ನೆನಪು:** ಹರ್ಭಜನ್ ಸಿಂಗ್ ಹಾಗೂ ಪ್ರವೀಣ್ ಕುಮಾರ್ ಅವರ ಆಟ 1996 ಅಕ್ಟೋಬರ್ 21ರಂದು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆದ ಆಸೀಸ್ ವಿರುದ್ಧದ ಟೈಟಾನ್ ಕಪ್ ಪಂದ್ಯವನ್ನು ನೆನಪಿಸಿತು. ಅಂದು ಜಾವಗಲ್ ಶ್ರೀನಾಥ್ (ಅಜೇಯ 30) ಹಾಗೂ ಅನಿಲ್ ಕುಂಬ್ಳೆ (ಅಜೇಯ 16) 8ನೇ ವಿಕೆಟ್ ಜೊತೆಯಾಟದಲ್ಲಿ 52 ರನ್ ಸಿಡಿಸಿ ಜಯ ತಂದಿದ್ದರು. ಆದರೆ ಹರ್ಭಜನ್ ಸಿಂಗ್ ಹಾಗೂ ಪ್ರವೀಣ್ ಕುಮಾರ್ 84 ರನ್ ಜೊತೆಯಾಟವಾಡಿದರೂ ಜಯ ದಕ್ಕಲಿಲ್ಲ.

ವಡೋದರದ ರಿಲಾಯನ್ಸ್ ಕ್ರೀಡಾಂಗಣದಲ್ಲಿ ಎರಡೂ ತಂಡಗಳ ಬೌಲರ್‌ಗಳು ವಿಕೆಟ್‌ಗಾಗಿ ಪರದಾಡಬೇಕಾಯಿತು. ಟಾಸ್ ಗೆದ್ದು ಬ್ಯಾಟಿಂಗ್ ಆಯ್ದುಕೊಂಡ ಆಸ್ಟ್ರೇಲಿಯಾ ನಾಯಕ ರಿಕಿ ಪಾಂಟಿಂಗ್ (74), ಮೈಕ್ ಹಸ್ಸೆ (73), ಪೇನ್ (50) ಮತ್ತು ಕೆಮರೂನ್ ವೈಟ್ (51) ಆಕರ್ಷಕ ಬ್ಯಾಟಿಂಗ್ ನೆರವಿನಿಂದ 292 ರನ್ ಗಳಿಸಿತು. ಇಶಾಂತ್ 3 ಹಾಗೂ ಆಶಿಶ್ ನೆಹ್ರಾ 2 ವಿಕೆಟ್ ಗಳಿಸಿದರೂ ಭಾರತದ ಬೌಲರ್‌ಗಳಿಗೆ ರನ್ ನಿಯಂತ್ರಿಸುವಲ್ಲಿ ಸಾಧ್ಯವಾಗಲಿಲ್ಲ. ಪ್ರವೀಣ್ ಕುಮಾರ್ 10 ಓವರ್‌ಗಳಲ್ಲಿ 77 ರನ್ ನೀಡಿದರೂ ವಿಕೆಟ್ ಸಿಗಲಿಲ್ಲ.

293 ರನ್ ಜಯದ ಗುರಿಹೊತ್ತ ಭಾರತ ಅತಿರಥ ಮಹಾರಥರ ವಿಕೆಟ್ ಬೇಗನೆ ಕಳೆದುಕೊಂಡು ಸಂಕಷ್ಟಕ್ಕೆ ಸಿಲುಕಿತು. ಲೀ ಅವರ ಮೊದಲ ಓವರ್‌ನಲ್ಲಿ ನಿರಂತರ 2 ಬೌಂಡರಿ ಸಿಡಿಸಿದ ವೀರೇಂದ್ರ ಸೆಹ್ವಾಗ್ ಮಿಂಚಿನ ಆರಂಭ ಕಲ್ಪಿಸಿದ್ದರು.

ಆದರೆ 13 ರನ್ ಗಳಿಸುವಷ್ಟರಲ್ಲೇ ಸೆಹ್ವಾಗ್ ಪೆವಿಲಿಯನ್ ಹಾದಿ ಹಿಡಿದರು. ನಂತರ ಸಚಿನ್ 14 ರನ್ ಗಳಿಸಿ ಸೆಹ್ವಾಗ್ ಹಾದಿ ತುಳಿದರು. ನಂತರ ವಿರಾಟ್ ಕೊಹ್ಲಿ (30) ಮತ್ತು ಗೌತಮ್ ಗಂಭೀರ್ (68) ಆಸೀಸ್ ಬೌಲಿಂಗ್ ದಾಳಿಯನ್ನು ಸಮರ್ಥವಾಗಿ ಎದುರಿಸಿ ಮೊತ್ತವನ್ನು ಶತಕದ ಗಡಿ ದಾಟಿಸಿದರು. ಆದರೆ ಕೊಹ್ಲಿ ಬಿರುಸಿನ ಹೊಡೆತಕ್ಕೆ ಮನ ಮಾಡಿ ವೋಗ್ಸ್ ಎಸೆತದಲ್ಲಿ ವ್ಯಾಟ್ಸನ್‌ಗೆ ಕ್ಯಾಚಿತ್ತರು.

ನಂತರ ಧೋನಿ (30), ರವೀಂದ್ರ ಜಡೇಜಾ (5) ಹಾಗೂ ಸುರೇಶ್ ರೈನಾ (9) ಬ್ಯಾಟಿಂಗ್‌ನಲ್ಲಿ ವೈಫಲ್ಯಗೊಳ್ಳುವುದರೊಂದಿಗೆ ಭಾರತ ಸೋಲಿನ ಹಾದಿ ತುಳಿಯಿತು.

ಆದರೆ ಪ್ರವೀಣ್ ಕುಮಾರ್ ಮತ್ತು ಹರ್ಭಜನ್ ಸಿಂಗ್ 8ನೇ ವಿಕೆಟ್ ಜೊತೆಯಾಟದಲ್ಲಿ 57 ಎಸೆತಗಳಲ್ಲಿ 84 ರನ್ ಸಿಡಿಸಿದಾಗ ಭಾರತದ ಜಯದ ಆಸೆ ಜೀವಂತವಾಯಿತು. ಹರ್ಭಜನ್ ಸಿಂಗ್ ಸಿಡ್ಲ್ ಬೌಲಿಂಗ್‌ನಲ್ಲಿ ಕ್ಲೀನ್ ಬೌಲ್ಡ್ ಆದಾಗ ಭಾರತ ಮತ್ತೆ ಸೋಲಿನ ದವಡೆಗೆ ಸಿಲುಕಿತು. ಕೊನೆಯ ಓವರ್‌ನಲ್ಲಿ 9ರನ್ ಗಳಿಸಬೇಕಾಗಿದ್ದ ಭಾರತ ಕೇವಲ 5 ರನ್ ಗಳಿಸಿ ಸೋಲೊಪ್ಪಿಕೊಂಡಿತು. ಮೈಕ್ ಹಸ್ಸಿ ಪಂದ್ಯಶ್ರೇಷ್ಠರೆನಿಸಿದರು.

ಪ್ರವೀಣ್ ಅವರಿಂದ ಬ್ಯಾಟ್ ಪಡೆದು ಮುತ್ತಿಕ್ಕಿದ ಬ್ರೆಟ್ ಲೀ.

■ **ಸಂಕ್ಷಿಪ್ತ ಸ್ಕೋರ್**

ಆಸ್ಟ್ರೇಲಿಯಾ 8 ವಿಕೆಟ್‌ಗೆ 292	ಭಾರತ 8 ವಿಕೆಟ್‌ಗೆ 288
ರಿಕಿ ಪಾಂಟಿಂಗ್–74, ಪೇನ್–50, ವೈಟ್–51, ಹಸ್ಸೇ–73) ಬೌಲಿಂಗ್: ಇಶಾಂತ್ ಶರ್ಮಾ–50 ಕ್ಕೆ 3.	ಗಂಭೀರ್–68, ಕೊಹ್ಲಿ–30, ಧೋನಿ–34, ಭಜ್ಜಿ–49, ಪ್ರವೀಣ್–ಅ.40.) ವ್ಯಾಟ್ಸನ್–70ಕ್ಕೆ 2, ಜಾನ್ಸನ್–59ಕ್ಕೆ 2.

ಹ್ಯಾಂಡ್‌ಬಾಲ್: ಜಾವಳ್ಳಿಗೆ ಮಿಶ್ರಫಲ

ಶಿವಮೊಗ್ಗ: ಸಿಬಿಎಸ್‌ಸಿ ಶಾಲೆಗಳ ರಾಷ್ಟ್ರೀಯ ಸಬ್ ಜ್ಯೂನಿಯರ್ ಹ್ಯಾಂಡ್‌ಬಾಲ್ ಟೂರ್ನಿಯಲ್ಲಿ ಭಾನುವಾರ ಮೊದಲ ದಿನ ಅತಿಥೇಯ ಜಾವಳ್ಳಿ ಜ್ಞಾನದೀಪ ಶಾಲೆಯು ಮಿಶ್ರಫಲ ಅನುಭವಿಸಿದೆ.

19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಸೋಲು ಅನುಭವಿಸಿದರೆ, 14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಗೆಲವು ಪಡೆದಿದೆ. 19 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಜಲಂದರ್‌ನ ಡಿಎವಿ ಪೊಲೀಸ್ ಪಬ್ಲಿಕ್ ಶಾಲೆಯು ಗೋವಿಂದಪುರಂನ ಡಿಡಿಪಿಎಸ್ ವಿರುದ್ಧ 20–13 ಗೋಲ್‌ಗಳ ಭರ್ಜರಿ ಜಯ ಸಾಧಿಸಿದೆ. ನಗರದ ನೆಹರೂ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಟೂರ್ನಿಯ ಇನ್ನೊಂದು ಪಂದ್ಯದಲ್ಲಿ ಮಧ್ಯಪ್ರದೇಶದ ಟೆಂಕಾಪುರದ ಬಿಎಸ್‌ಎಫ್ ಎಸ್‌ಎಸ್‌ಎಸ್ ಶಾಲೆಯು ಗೊಯೆಂಕಾ ಪಬ್ಲಿಕ್ ಶಾಲೆ ವಿರುದ್ಧ 16–12 ಗೋಲ್‌ಗಳ ಅಂತರದಲ್ಲಿ ಗೆಲವು ಪಡೆಯಿತು.

ಅತಿಥೇಯ ಜಾವಳ್ಳಿಯ ಜ್ಞಾನದೀಪ ಶಾಲೆಯ ಬಾಲಕಿಯರು ಮೊದಲ ಪಂದ್ಯದಲ್ಲೇ ಗಾಜಿಯಾಬಾದ್‌ನ ಸಂಜಯನಗರ ಡಿಡಿಪಿಎಸ್ ಶಾಲೆ ವಿರುದ್ಧ ಒಂದು ಗೋಲ್‌ನಿಂದ ಸೋಲನುಭವಿಸಿದೆ. ಗಾಜಿಯಾಬಾದ್ ತಂಡವು 7–6 ಅಂತರದಲ್ಲಿ ಗೆಲವು ಪಡೆದಿದೆ.

14 ವರ್ಷದೊಳಗಿನ ಬಾಲಕಿಯರ ವಿಭಾಗದಲ್ಲಿ ಜಾವಳ್ಳಿ ಶಾಲೆಯು ಜಮ್ಮುವಿನ ಬಿಎಸ್‌ಎಫ್ ಎಸ್‌ಎಸ್‌ಎಸ್ ವಿರುದ್ಧ 12–3 ಗೋಲುಗಳ ಭರ್ಜರಿ ಜಯ ಪಡೆಯಿತು. ಇನ್ನೊಂದು ಪಂದ್ಯದಲ್ಲಿ ಡೆಹ್ರಾಡೂನ್ ಪಬ್ಲಿಕ್ ಶಾಲೆಯು ಬೆಂಗಳೂರಿನ ಬೆಮೆಲ್ ವಿದ್ಯಾಲಯದ ವಿರುದ್ಧ 15–7 ಅಂತರದಲ್ಲಿ ಗೆದ್ದಿದೆ.

14 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ವಿಶಾಖಪಟ್ಟಣದ ನೇವಿ ಚಿಲ್ಡ್ರನ್ ಶಾಲೆ ಹಾಗೂ ಡೆಹ್ರಾಡೂನ್ ಪಬ್ಲಿಕ್ ಶಾಲೆ ನಡುವಿನ ಪಂದ್ಯ ಡ್ರಾನಲ್ಲಿ ಅಂತ್ಯವಾಯಿತು. ಎರಡೂ ತಂಡಗಳು ತಲಾ 7 ಗೋಲು ಗಳಿಸಿದವು. ಜಲಂದರ್‌ನ ಎಂಜಿಎಂ ಶಾಲೆಯು ಜಮ್ಮುವಿನ ಬಿಎಸ್‌ಎಫ್ ಸೀನಿಯರ್ ಸೆಕೆಂಡರಿ ವಿರುದ್ಧ 18–10 ಗೋಲುಗಳ ಅಂತರದಲ್ಲಿ ಸೋಲನುಭವಿಸಿದೆ.

ಬೆಂಗಳೂರು ಚಾಂಪಿಯನ್

● ದ.ವಲಯ ಅಂತರ್ ವಿವಿ ಹಾಕಿ

ಕನ್ನಡಪ್ರಭವಾರ್ತೆ, ಬೆಂಗಳೂರು, ಅ.25: ನಿತಿನ್ ದಾಖಲಿಸಿದ ಅಮೂಲ್ಯ 2 ಗೋಲುಗಳ ನೆರವಿನಿಂದ ಅಣ್ಣಾಮಲೈ ವಿಶ್ವವಿದ್ಯಾನಿಲಯದ ವಿರುದ್ಧ ಜಯ ಸಾಧಿಸಿದ ಬೆಂಗಳೂರು ವಿಶ್ವವಿದ್ಯಾನಿಲಯ ದಕ್ಷಿಣ ವಲಯ ಅಂತರ್ ವಿವಿ ಹಾಕಿ ಚಾಂಪಿಯನ್‌ಷಿಪ್ ಗೆದ್ದುಕೊಂಡಿದೆ.

ಚಾಂಪಿಯನ್ ಪಟ್ಟಕ್ಕೇರಲು ಬೆಂಗಳೂರು ವಿವಿಗೆ ಕೇವಲ ಡ್ರಾದ ಅಗತ್ಯವಿದ್ದಿತ್ತು. ಆದರೆ ಸೂಪರ್ ಲೀಗ್ 6ನೇ ಪಂದ್ಯದಲ್ಲಿ ಅಣ್ಣಾಮಲೈ ವಿರುದ್ಧ 4–2 ಗೋಲುಗಳಿಂದ ಗೆದ್ದ ಬೆಂಗಳೂರು ತಂಡ ಒಟ್ಟು 6 ಅಂಕಗಳನ್ನು ಗಳಿಸಿ ಚಾಂಪಿಯನ್ ಪಟ್ಟಕ್ಕೇರಿತು. ದಿನದ ಮೊದಲ ಪಂದ್ಯದಲ್ಲಿ ಮದ್ರಾಸ್ ವಿಶ್ವವಿದ್ಯಾನಿಲಯ ಭಾರತಿದಾಸನ್ ವಿಶ್ವವಿದ್ಯಾನಿಲಯದ ವಿರುದ್ಧ 4–0 ಗೋಲುಗಳಿಂದ ಜಯ ಸಾಧಿಸಿ 4 ಅಂಕಗಳೊಂದಿಗೆ ದ್ವಿತೀಯ ಸ್ಥಾನ ಪಡೆಯಿತು. ಅಣ್ಣಾಮಲೈ ಹಾಗೂ ಭಾರತಿದಾಸ್ ವಿಶ್ವವಿದ್ಯಾನಿಲಯಗಳು ಅನುಕ್ರಮವಾಗಿ 3 ಮತ್ತು 4ನೇ ಸ್ಥಾನಕ್ಕೆ ತೃಪ್ತಿಪಟ್ಟವು.

ಬೆಂಗಳೂರು ತಂಡದ ನಿತಿನ್ 9ನೇ ನಿಮಿಷದಲ್ಲಿ ಗೋಲು ದಾಖಲಿಸಿ ಮುನ್ನಡೆ ತಂದಿತ್ತರು. ನಂತರ ನೈಮುದ್ದೀನ್ 11ನೇ ನಿಮಿಷದಲ್ಲಿ ತಂಡದ ಪರ 2ನೇ ಗೋಲು ದಾಖಲಿಸಿದರು. ಮತ್ತೊಮ್ಮೆ ಉತ್ತಮ ಆಟ ಪ್ರದರ್ಶಿಸಿದ ನಿತಿನ್ 19ನೇ ನಿಮಿಷದಲ್ಲಿ ವೈಯಕ್ತಿಕ 2ನೇ ಗೋಲು ದಾಖಲಿಸುವುದರೊಂದಿಗೆ ಬೆಂಗಳೂರು ವಿವಿ 3–0 ಅಂತರದಲ್ಲಿ ಮುನ್ನಡೆ ಸಾಧಿಸಿತು. ಆದರೆ ಪ್ರಥಮಾರ್ಧದ ಕೊನೆ ಕ್ಷಣದ ಆಟದಲ್ಲಿ ಹಿಡಿತ ಸಾಧಿಸಿದ ಅಣ್ಣಾಮಲೈ ತಂಡದ ಪರ ರಾಜಾ ಮತ್ತು ಅಶ್ವಿನಿ ಅನುಕ್ರಮವಾಗಿ 22 ಮತ್ತು 25ನೇ ನಿಮಿಷಗಳಲ್ಲಿ ತಲಾ 1 ಗೋಲು ದಾಖಲಿಸುವುದರೊಂದಿಗೆ ಗೋಲಿನ ಅಂತರ 3–2. ದ್ವಿತಿಯಾರ್ಧದ 42ನೇ ನಿಮಿಷದಲ್ಲಿ ಬೆಂಗಳೂರು ತಂಡದ ಮುದ್ದಪ್ಪ ತಂಡದ ಪರ 4ನೇ ಗೋಲು ದಾಖಲಿಸುವುದರೊಂದಿಗೆ ಆತಿಥೇಯ ಬೆಂಗಳೂರು ತಂಡ 4–2 ಅಂತರದಿಂದ ಜಯ ಸಾಧಿಸಿ ಅಗ್ರ ಸ್ಥಾನದೊಂದಿಗೆ ಚಾಂಪಿಯನ್ ಎನಿಸಿತು.

ದಾವಣಗೆರೆ ಉಪಾಂತ್ಯಕ್ಕೆ

■ ಬೆಂಗಳೂರು ವಿಭಾಗ ಮಟ್ಟದ ಬಾಸ್ಕೆಟ್‌ಬಾಲ್ ಟೂರ್ನಿ

ದಾವಣಗೆರೆ ಅ.25: ಆತಿಥೇಯ ದಾವಣಗೆರೆ ಜಿಲ್ಲಾ ಬಾಲಕ –ಬಾಲಕಿಯರ ತಂಡಗಳು ನಗರದಲ್ಲಿ ಭಾನುವಾರ ಆರಂಭಗೊಂಡ ಬೆಂಗಳೂರು ವಿಭಾಗ ಮಟ್ಟದ ಬಾಸ್ಕೆಟ್‌ಬಾಲ್ ಪಂದ್ಯಾವಳಿ 14 ವರ್ಷದೊಳಗಿನ ಬಾಲಕ, ಬಾಲಕಿಯರ ವಿಭಾಗದ ಉಪಾಂತ್ಯ ಹಂತಕ್ಕೆ ತಲುಪಿವೆ. ಬಾಲಕರ ವಿಭಾಗದಲ್ಲಿ ದಾವಣಗೆರೆ, ಬೆಂಗಳೂರು ದಕ್ಷಿಣ, ಬೆಂಗಳೂರು ಗ್ರಾಮಾಂತರ ಮತ್ತು ಚಿಕ್ಕಬಳ್ಳಾಪುರ ತಂಡ ಸೆಮಿಫೈನಲ್‌ಗೆ ಪ್ರವೇಶಿಸಿದ್ದರೆ, ಬಾಲಕಿಯರ ವಿಭಾಗದಲ್ಲಿ ದಾವಣಗೆರೆ, ಚಿತ್ರದುರ್ಗ, ಬೆಂಗಳೂರು ಉತ್ತರ, ಬೆಂ.ದಕ್ಷಿಣ ತಂಡಗಳು ಪ್ರವೇಶಿಸಿವೆ.

ಅಶ್ವಿನಿಗೆ ಕಿರೀಟ

●ಅಮೋಘ್, ನಕುಲ್ ಚಾಂಪಿಯನ್

ಬೆಂಗಳೂರು, ಅ.25: ಹತ್ತು ವರ್ಷದೊಳಗಿನವರ ರ‍್ಯಾಂಕಿಂಗ್‌ನಲ್ಲಿ ಕಳೆದ ಎರಡು ವರ್ಷಗಳಿಂದ ಅಗ್ರ ಸ್ಥಾನ ಕಾಯ್ದಿಕೊಂಡು ಬಂದಿರುವ ಅಶ್ವಿನಿ ಭಟ್ ಬೆಂಗಳೂರಿನಲ್ಲಿ ನಡೆಯುತ್ತಿರುವ ರಾಜ್ಯ ರ‍್ಯಾಂಕಿಂಗ್ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಸಿಂಗಲ್ಸ್ ಚಾಂಪಿಯನ್ ಆಗಿ ಹೊರಹೊಮ್ಮಿದ್ದಾರೆ. ಭಾನುವಾರ ನಡೆದ ಫೈನಲ್ ಪಂದ್ಯದಲ್ಲಿ ಪ್ರಾರ್ಥನಾ ಆನಂದ್ ಅವರನ್ನು 21–8, 21–6ರಿಂದ ಸೋಲಿಸಿ ಪ್ರಶಸ್ತಿ ಗೆದ್ದುಕೊಂಡಿದ್ದಾರೆ. 10 ವರ್ಷದೊಳಗಿನ ಬಾಲಕರ ವಿಭಾಗದಲ್ಲಿ ಬಿ.ಎಸ್.ಶಂತನು, ಆಯುಷ್, ವಿಷ್ಣು ಪೌರಾ ಮತ್ತು ಅಮೋಘ್ ಗುಪ್ತಾ ಸೆಮಿಫೈನಲ್ ಪ್ರವೇಶಿಸಿದ್ದಾರೆ.